ಛಾಯಾ ಭಟ್

# ಹುಲ್ಲಾಗು ಬೆಟ್ಟದಡಿ



ಕೊರತೆಯಾಗುವುದಿಲ್ಲ ಎಂಬುದು ಖಾತ್ರಿ. ಮದರಂಗಿಯ ರಂಗಿನಲ್ಲಿ ಗಂಡನಾಗುವವನ ಪ್ರೀತಿಯನ್ನು ಒರೆಗೆ ಹಚ್ಚುವ ಕಾತುರದಲ್ಲಿರುತ್ತಿದ್ದರು ಬಾಳೆಕುಳಿಯ ಮದುವಣಗಿತ್ತಿಯರು. ಇಷ್ಟೇ ಅಲ್ಲ, ಫಾತಿಮಾ ಬಿಡಿಸಿದ ಮದರಂಗಿಯಲ್ಲಿ ಎಲ್ಲೋ ಅಡಗಿ ಕುಳಿತ ತಮ್ಮ ಹೆಸರನ್ನು ಹುಡುಕುವ ಮದುಮಗ, ಅವನ ಹುಡುಕಾಟದಲ್ಲಿ ಮೈಮರೆವ ನವ ವಧು... ಬದುಕಿನುದ್ದಕ್ಕೂ ನೆನೆದರೆ ನವಿರಾಗುವ ಆ ರಾತ್ರಿಗೆ ಫಾತಿಮಾಳ ಮದರಂಗಿ ಮತ್ತಷ್ಟು ಪುಳಕದ ರಂಗೇರಿಸುತ್ತಿತ್ತು.

‘ಶಾರಕ್ಕಾ, ಗಂಡನಾಗುವವನ ಹೆಸರೇನೆ, ಮದರಂಗಿಯಲ್ಲಿ ಅವನ ಹೆಸರು ಬರೆಯುವುದುಂಟು’